

4th maths (k) topic: 14 ಶ್ರೀ ರಾಮಕೃಷ್ಣವಿದ್ಯಾಕೇಂದ್ರ.ಶಿವನಹಳ್ಳಿ

ಕೆಳಗಿನ ಕಥೆಯನ್ನು ಓದಿರಿ, ನಂತರ ಪ್ರಶ್ನೆಗಳಿಗೆ ಉತ್ತರಿಸಿ.

ಒಂದಾನೊಂದು ಕಾಲದಲ್ಲಿ ಒಬ್ಬ ದೊಡ್ಡ ಮಹಾರಾಜನಿದ್ದನು. ಒಂದು ಸಲ ಅವನು ಪ್ರವಾಸಕ್ಕಾಗಿ ಹೊರಟು ನಿಂತಾಗ, ತಕ್ಷಣಕ್ಕೆ ಬೇರೋಂದು ರಾಜ್ಯದ ದೂತರಿಂದ ಯುದ್ಧದ ಆಹ್ವಾನಕ್ಕಾಗಿ ಓಲೆ ಬಂದಿತು. ಇದನ್ನು ಕೇಳಿದ ರಾಜನು ಕೋಪಗೊಂಡು ತನ್ನ ಸೇನಾಪತಿಯನ್ನು ಕರೆದು ಯುದ್ಧಕ್ಕೆ ಸಿದ್ಧರಾಗಬೇಕೆಂದು ಹೇಳಿಕೊಂಡನು. ನಂತರ ತನ್ನ ರಾಜ್ಯದ ಸೈನ್ಯದ ತುಕಡಿಗಳ ಸಂಪೂರ್ಣ ಮಾಹಿತಿಯನ್ನು ತಿಳಿಸುವಂತೆ ಹೇಳಿದನು. ನಂತರ ಸೇನಾಪತಿಯು ಸೈನ್ಯದ ತುಕಡಿಗಳ ಒಟ್ಟು ಮಾಹಿತಿಯನ್ನು ಈ ಕೆಳಕಂಡಂತೆ ಮಾಹಿತಿ ಕೊಟ್ಟನು.

| ಸೈನ್ಯದ ಹೆಸರು | ಪ್ರತಿ ಗುಂಪಿನಲ್ಲಿ | ಒಟ್ಟು ಗುಂಪುಗಳು |
|---|---|---|
| ಸೈನಿಕರು  | 10 | 5 |
| ಆನೆಗಳು  | 5 | 4 |
| ಕುದುರೆಗಳು  | 5 | 4 |
| ಒಟ್ಟು | | |

ಮೇಲಿನ ದತ್ತಾಂಶಗಳನ್ನು ನೋಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

a. ಸೈನಿಕರ ಚಿತ್ರಗಳನ್ನು ಬಿಡಿಸಿ ಮತ್ತು ಒಟ್ಟು ಸೈನಿಕರ ಸಂಖ್ಯೆಯನ್ನು ಎಣಿಸಿ ?

b. ಆನೆಗಳ  ಚಿತ್ರ ಗಳನ್ನು ಬಿಡಿಸಿ ಮತ್ತು ಒಟ್ಟು ಆನೆಗಳ   ಸಂಖ್ಯೆಯನ್ನು ಎಣಿಸಿ ?

c.  ಕುದುರೆಗಳ ಚಿತ್ರ ಗಳನ್ನು ಬಿಡಿಸಿ ಮತ್ತು ಒಟ್ಟು ಕುದುರೆಗಳ  ಸಂಖ್ಯೆಯನ್ನು ಎಣಿಸಿ ?

ಕೆಳಗಿನ ವಾಕ್ಯರೂಪದ ಪ್ರಶ್ನೆಗಳಿಗೆ ಚಿತ್ರದರೂಪದಲ್ಲಿ ತೋರಿಸಿ

a. ಒಂದು ತರಗತಿಯಲ್ಲಿ ಒಟ್ಟು 7 ಬೆಂಚುಗಳಿವೆ, ಪ್ರತಿ ಬೆಂಚಿನಲ್ಲಿಯು 5 ಜನ ವಿದ್ಯಾರ್ಥಿಗಳಿದ್ದಾರೆ,ಹಾಗಾದರೆ ತರಗತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಚಿತ್ರದ ರೂಪದಲ್ಲಿ ಬರೆಯಿರಿ

b. ನಿನ್ನ ಬಳಿ ಒಟ್ಟು 10 ಬಿಸ್ಕೇಟ್ ಪ್ಯಾಕ್ ಗಳಿವೆ, ಪ್ರತಿ ಪ್ಯಾಕ್ ಗಳಲ್ಲಿ 8 ಬಿಸ್ಕೇಟ್ ಗಳಿವೆ,ಹಾಗಾದರೆ ನಿನ್ನ ಬಳಿ ಇರುವ ಒಟ್ಟು ಬಿಸ್ಕೇಟ್ ಗಳನ್ನು ಚಿತ್ರದ ರೂಪದಲ್ಲಿ ಬರೆಯಿರಿ

c. ನಿಮ್ಮ ಮನೆಯಲ್ಲಿರುವ  ಪ್ರತಿಯೊಬ್ಬರ ಬಳಿ 100 ರೂಗಳಿದ್ದರೆ ,ಆಗುವ ಹಣವನ್ನು ಚಿತ್ರದ ರೂಪದಲ್ಲಿ ಬರೆದು , ಒಟ್ಟು ಹಣವನ್ನು ಎಣಿಸಿ.?